

# ಹೆಣ್ಣಿನ ದೇಹ ಯಾರ ಸ್ವತ್ತು?



■ ಕಾವ್ಯಾ ಕಡಮೆ
ಲೇಖಕಿ

ಅದೊಂದು ಕಲ್ಪಿತ ದೇಶ. ಹೆಸರು ಗಿಲಿಯಡ್. ಹಿಂದೊಮ್ಮೆ ಸ್ವತಂತ್ರ ನಾಡಾಗಿದ್ದ ಆ ಊರನ್ನು ಈಗ ಮೂಲಭೂತವಾದಿಗಳು ವಶಪಡಿಸಿಕೊಂಡು ಆಳುತ್ತಿದ್ದಾರೆ. ಹೆಂಗಸರನ್ನು ಅವರವರ ದೇಹದ ಸಾಮರ್ಥ್ಯಕ್ಕೆ ತಕ್ಕಂತೆ ಆರು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ನೀಲಿ ಬಟ್ಟೆ ತೊಡುವ ಗೌರವಾನ್ವಿತ ಹೆಂಡತಿಯರು, ಹಸಿರು ತೊಡುವ ಕೆಲಸದಾಳುಗಳು, ಕಂದು ಬಟ್ಟೆಯ ಮೇಲ್ವಿಚಾರಕಿಯರು, ಕಪ್ಪು ತೊಡುವ ವಿಧವೆಯರು... ಹೀಗೆ. ಅದರಲ್ಲೇ ಇರುವ ಇನ್ನೊಂದು ಪಂಗಡವೆಂದರೆ, ಕೆಂಪು ಧರಿಸುವ ಹ್ಯಾಂಡ್‌ಮೇಡ್‌ಗಳು.

ತಮ್ಮನ್ನು ಆಳುವ ದೊರೆಗಳಿಗೆ ಮಕ್ಕಳನ್ನು ಒದಗಿಸುವುದು ಈ ಹ್ಯಾಂಡ್‌ಮೇಡ್‌ಗಳ ಕೆಲಸ. ವಿಚಿತ್ರ ಬಗೆಯ ಒಂದು ಆಚರಣೆಯ ಮೂಲಕ ಈ ಕಾರ್ಯಕ್ಕೆ ಪಾವಿತ್ರ್ಯದ ಮೊಹರೂ ಬಿದ್ದಿದೆ. ತಮಗೆ ಕೊಟ್ಟ ಅಸೈನ್‌ಮೆಂಟನ್ನು ಮೂರು ವರ್ಷದಲ್ಲಿ ಮುಗಿಸಿ ಕೊಡದಿದ್ದರೆ ಈ ಹೆಂಗಸರನ್ನು ಗಡೀಪಾರು ಮಾಡಲಾಗುತ್ತದೆ. ನಂತರ ಗಡೀಪಾರು ಮಾಡಲಾದ ಅವರು ಈ ಕಲುಷಿತ ಕಾಲನಿಗಳಲ್ಲಿ ಸಾಯುವ ತನಕ ಫೆಮಿನಿಸ್ಟ್‌ಗಳು, ಜರ್ನಲಿಸ್ಟುಗಳು ಮುಂತಾದ ‘ಅನ್‌ವಿಮೆನ್’ಗಳ ಜೊತೆಗೆ ಇರಬೇಕಾಗುತ್ತದೆ. ಆ ಪಾಡಿನಿಂದ ತಪ್ಪಿಸಿಕೊಳ್ಳಲು ಈ ಹ್ಯಾಂಡ್‌ಮೇಡ್‌ಗಳು ವರ್ಷಕ್ಕೊಂದರಂತೆ ಮಕ್ಕಳನ್ನು ಹಡೆದು ತಮ್ಮ ಧಣಿಗಳಿಗೆ ಅರ್ಪಿಸುತ್ತಾರೆ.

ದುಃಸ್ವಪ್ನವೊಂದರ ಸಾಕಾರ ರೂಪದಂತಿರುವ ‘ದ ಹ್ಯಾಂಡ್‌ಮೇಡ್ಸ್ ಟೇಲ್’ ಎಂಬ ಈ ಕಾದಂಬರಿಯನ್ನು ಬರೆದವರು ಕೆನಡಾದ ಕವಿ, ಕಾದಂಬರಿಗಾರ್ತಿ ಮಾರ್ಗರೆಟ್ ಆಟ್‌ವುಡ್. ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀದ್ವೇಷ ಹೀಗೆಯೇ ಮುಂದುವರೆಯುತ್ತ ಹೋದರೆ ಮುಂದೊಂದು ದಿನ ಎಂಥ ಪರಿಸ್ಥಿತಿ ಒದಗಬಹುದು ಎಂದು 1986ರ ಬೂಕರ್ ಪ್ರಶಸ್ತಿ ಪಡೆದ ಈ ಕೃತಿಯಲ್ಲಿ ಚಿತ್ರಿಸಲಾಗಿದೆ. ‘ಅಂಥ ದಿನಗಳು ಎಂದಿಗೂ ಬರಲಿಕ್ಕಿಲ್ಲ, ಅದೊಂದು ಕಟ್ಟುಕತೆ ಅಷ್ಟೇ’ ಎಂದು ತಳ್ಳಿಹಾಕಿ ಮುಂದೆ ನಡೆದುಬಿಟ್ಟಿರುತ್ತೇವೆ. ಆದರೆ ಆಗೊಮ್ಮೆ ಈಗೊಮ್ಮೆ ಅಧಿಕಾರ ಹೊಂದಿರುವವರು ಸ್ತ್ರೀಯರ ಕುರಿತು ದ್ವೇಷ ಕಾರುವುದಲ್ಲದೇ ನಂತರ ಅದನ್ನು ಸಮರ್ಥಿಸಿಕೊಳ್ಳುವುದನ್ನೂ ಕಂಡಾಗ, ಇವರಿಗೆ ಅಪ್ಪಿ ತಪ್ಪಿ ಸರ್ವಾಧಿಕಾರವೇನಾದರೂ ಸಿಕ್ಕಿಬಿಟ್ಟರೆ ಎಂತೆಂಥ ಕ್ರೌರ್ಯವೆಸಗಬಹುದು ಎಂದು ಭಯವಾಗುತ್ತದೆ.

ಹೆಣ್ಣನ್ನು, ಅದೂ ಸಂತಾನಶಕ್ತಿ ಹೊಂದಿರುವ ಹೆಣ್ಣನ್ನು ಅಂಕೆಯಲ್ಲಿಡಲು, ಆಕೆಯ ಮೇಲೆ ಪಾರಮ್ಯ ಸಾಧಿಸಲು ಎಲ್ಲ ಕಾಲದಲ್ಲೂ ಎಲ್ಲ ಸಂಸ್ಕೃತಿಗಳಲ್ಲಿಯೂ ಕಾದಾಟ ನಡೆದಿದೆ, ನಡೆಯುತ್ತಿದೆ. ಆರ್ಥಿಕ ಸ್ವಾತಂತ್ರ್ಯ ಹೊಂದಿರಲಿ, ಹೊಂದದೇ ಇರಲಿ ಹೆಣ್ಣನ್ನು ಎಲ್ಲ ಕಾಲದಲ್ಲೂ ಅಪ್ರಾಪ್ತರ ಗುಂಪಿಗೇ ಸೇರಿಸಲಾಗಿದೆ. ‘ನೀವು ಪಾಪದವರು, ಬುದ್ಧಿಯಿಲ್ಲದವರು, ನಾವು ಹೇಳಿದಂತೆ ಕೇಳುವುದೇ ನಿಮಗೆ ಉಳಿದಿರುವ ದಾರಿ’ ಎಂದು ನಂಬಿಸಲು ಹುನ್ನಾರ ನಡೆದೇ ಇದೆ. ತನ್ನನ್ನು ತಾನು ದೈಹಿಕವಾಗಿಯೂ ಮಾನಸಿಕವಾಗಿಯೂ ಕಾಪಾಡಿಕೊಳ್ಳಲು ಹೆಣ್ಣು ಅಸಮರ್ಥಳು ಎಂಬ ಕಟ್ಟುಕತೆ ಹೆಣೆದು ಆಕೆಯನ್ನು ನಿಗ್ರಹಿಸಲು ಹುನ್ನಾರ ನಡೆಯುತ್ತಲೇ ಇರುತ್ತದೆ. ಆಕೆಯನ್ನು ಕುಟುಂಬದ ಚೌಕಟ್ಟಿನಲ್ಲಿ ಬಂಧಿಸಿಡುವುದೊಂದೇ ಉಳಿದಿರುವ